**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 06.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ.ಜಿ ಬಿ ಪಿ ವಕೀಲರಿಂದಃ**

5. ನಿಪಿ.3 ಅಪಘಾತ ಆದ ಬಗ್ಗೆ ವರದಿಯಾಗಿರುತ್ತದೆ. ನಿಪಿ.3 ರ ಪ್ಯಾರಾ ನಂ.5 ರಲ್ಲಿ ತನಿಖಾಧಿಕಾರಿ ಅಪಘಾತದಲ್ಲಿ ನಿಮ್ಮದೇ ತಪ್ಪಿದೆ ಎಂದು ಬರೆದಿರುತ್ತಾರೆಂದರೆ ಸಾಕ್ಷಿ ಸದರಿ ದಾಖಲೆಯನ್ನು ಓದಿ ನೋಡಿ ಬರೆದ ಸಂಗತಿ ನಿಜ ಇದೆ, ಆದರೆ ಸದರಿ ವಿಷಯ ಸುಳ್ಳು ಎಂದು ನುಡಿಯುತ್ತಾರೆ. ನಿಪಿ.3 ರಲ್ಲಿ ಆ ರೀತಿ ಬರೆಯುವುದರಲ್ಲಿ ತನಿಖಾಧಿಕಾರಿಯವರ ತಪ್ಪು ಇದೆ ಎಂದು ನಾನು ತಕರಾರು ಸಲ್ಲಿಸಿರುತ್ತೇನೆ. ನಾನು ಹಾಜರಪಡಿಸಿದ ದಾಖಲೆಗಳಲ್ಲಿ ಸದರಿ ದಾಖಲೆ ಇರುವುದಿಲ್ಲ ಎಂದರೆ ಸರಿ. ಅಪಘಾತ ಆದ ಸ್ಥಳದಲ್ಲಿ ರಸ್ತೆ ಅಂದಾಜು 5-6 ಅಡಿ ಅಗಲ ಇರುತ್ತದೆ. ಅಪಘಾತವಾದ ಸಮಯದಲ್ಲಿ ನಿಮ್ಮ ತಂದೆಯನ್ನು ಕರೆದುಕೊಂಡು ನೀವು ದಕ್ಷಿಣಕ್ಕೆ ದಿಕ್ಕಿಗೆ ಅಥವಾ ಉತ್ತರ ದಿಕ್ಕಿಗೆ ಬರುತ್ತಿದ್ದಿರಿ ಎಂದರೆ ಸಾಕ್ಷಿ ನನಗೆ ದಿಕ್ಕು ಗೊತ್ತಾಗುವುದಿಲ್ಲ ಚೇತ್ರಾ ಶಾಲೆಯಿಂದ ವಿಶ್ವೇಶ್ವರನಗರ ಹುಬ್ಬಳ್ಳಿಗೆ ಹೋಗುತ್ತಿದ್ದೇನು. ಮೃತ ಅಶೋಕ ಕುಲಕರ್ಣಿ ಜಡ್ಜ ಕ್ವಾರ್ಟರ್ಸ ಕಡೆಯಿಂದ ಶಕ್ತಿ ಕಾಲೋನಿ ಕಡೆ ಹೋಗುತ್ತಿದ್ದರು. ಸದರಿ ರಸ್ತೆ ಎಷ್ಟು ಅಡಿ ಉದ್ದ ಇತ್ತು ಎಂದು ನನಗೆ ಅಷ್ಟೊಂದು ಗೊತ್ತಿಲ್ಲ. ನೀವು ಸಂತೋಷ ನಗರದಿಂದ ಉತ್ತರದಿಂದ ದಕ್ಷಿಣದ ಕಡೆಗೆ ಹೋಗುತ್ತಿದ್ದೇನು ಹಾಗೂ ಮೃತ ಅಶೋಕ ಕುಲಕರ್ಣಿ ಇವರು ಪಶ್ಚಿಮದಿಂದ ಪೂರ್ವದ ಕಡೆಗೆ ಬರುತ್ತಿದ್ದರು ಎಂದರೆ ಸಾಕ್ಷಿ ನನಗೆ ದಿಕ್ಕುಗಳು ಅಷ್ಟು ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ನಾನು ಉತ್ತರದಿಂದ ದಕ್ಷಿಣದ ಕಡೆಗೆ ಬರುತ್ತಿರುವಾಗ ಅಶೋಕ ಕುಮಾರ ಇವರ ಬಲಗಾಲಿಗೆ ಡಿಕ್ಕಿಪಡಿಸಿರುತ್ತೇನೆಂದರೆ ಸರಿಯಲ್ಲ. ನಾನು ಬಲಗಾಲಿಗೆ ಡಿಕ್ಕಿಪಡಿಸಿದ ಕಾರಣ ಇದು ಮುಖಾಮುಖಿ ಅಪಘಾತ ಆಗುವುದಿಲ್ಲ ಎಂದರೆ ಸಾಕ್ಷಿ ನಾನು ಅವರಿಗೆ ಡಿಕ್ಕಿಪಡಿಸಿಲ್ಲ ಆದರೆ ಅವರೇ ನನಗೆ ಡಿಕ್ಕಿಪಡಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಹಾಗೂ ತನಿಖಾಧಿಕಾರಿ ಶಾಮಿಲಾಗಿ ಮುಖಾಮುಖಿ ಅಪಘಾತವಾಗಿದೆ ಎಂದು ಸುಳ್ಳು ದೋಷಾರೋಪಣೆಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನೀವು ಮೃತ ಅಶೋಕ ಕುಲಕರ್ಣಿರವರಿಗೆ ಡಿಕ್ಕಿ ಹೊಡೆದು ಗಾಯಪಡಿಸಿದ ಕಾರಣ ನನ್ನ ತಂದೆ ಸಹ ಕೆಳಗೆ ಬಿದ್ದು ಅವರಿಗೂ ಸಹ ನಾನು ಗಾಯಪಡಿಸಿರುತ್ತೇನೆಂದರೆ ಸಾಕ್ಷಿ ಇಲ್ಲ ಮೃತ ಅಶೋಕ ಕುಲಕರ್ಣಿಯವರೇ ನಮಗೆ

ಡಿಕ್ಕಿಪಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಅಪಘಾತದಲ್ಲಿ ನನಗೆ ಸಾದಾ ಸ್ವರೂಪದ ಗಾಯಗಳಾಗಿವೆ ಎಂದರೆ ಸರಿ. ಅಪಘಾತದಲ್ಲಿ ನನಗೆ ಮೂಳೆ ಮುರಿತ ಆಗಿಲ್ಲ ಎಂದರೆ ಸರಿ. ನಾನು ಕಿಮ್ಸ್ ಓಪಿಡಿಯಲ್ಲಿ ಚಿಕಿತ್ಸೆ ಪಡೆದು ಅದೇ ದಿನ ವಾಪಸ ಬಂದಿರುತ್ತೇನೆ ಎಂದರೆ ಸರಿ. ಅಪಘಾತದಲ್ಲಿ ನನಗೆ ಯಾವುದೇ ಗಂಭೀರಸ್ವರೂಪದ ಗಾಯಗಳು ಆಗದೇ ಇರುವ ಕಾರಣ ಹಾಗೂ ನಾನು ನನ್ನ ವಾಹನಕ್ಕೆ ವಿಮಾ ಪಾಲಿಸಿ ಹೊಂದದೇ ಇರುವ ಕಾರಣ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರಿಗೆ ತೊಂದರೆ ನೀಡುವ ಉದ್ದೇಶದಿಂದ ನಾನು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ವಿಮಾ ಪಾಲಿಸಿ ಹೊಂದದೇ ಇರುವ ಕಾರಣ ಈ ಪ್ರಕರಣದಲ್ಲಿ ಕೇಳಿರುವ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 3 ನೇ ಎದುರುದಾರರ ಪರ ಶ್ರೀ.ಎ ಎಂ ಎಸ್ ವಕೀಲರಿಂದಃ**

(ಈ ಹಂತದಲ್ಲಿ ಎದುರುದಾರ ನಂ.3 ಪರ ವಕೀಲರು 1 ನೇ ಎದುರುದಾರರ ವಕೀಲರು ಪಿಡಬ್ಲ್ಯೂ.1 ರವರಿಗೆ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ವಿನಂತಿಸಿದ್ದು ಅನುಮತಿಸಲಾಯಿತು).

**ಮುಂದುವರೆದ ಪಾಟೀ ಸವಾಲುಃ**

**6.** ನನ್ನ ವಾಹನ ಸಂಖ್ಯೆ ಕೆಎ-25/ಇಯು-2563 ಇದಕ್ಕೆ ಅಪಘಾತವಾದ ದಿನ ವಿಮಾ ಪಾಲಿಸಿ ಚಾಲ್ತಿಯಲ್ಲಿರಲಿಲ್ಲ ಎಂದರೆ ಸರಿ. ನನ್ನ ವಾಹನಕ್ಕೆ ವಿಮಾ ಪಾಲಿಸಿ ಇಲ್ಲದೇ ಇರುವ ಕಾರಣ ಪೊಲೀಸರ ಜೊತೆ ಶಾಮಿಲಾಗಿ ಎದುರುದಾರ ನಂ.2 ಇವರ ತಪ್ಪಿದೆ ಎಂದು ಸುಳ್ಳು ದೋಷಾರೋಪಣೆಪಟ್ಟಿ ಸಲ್ಲಿಸಲು ಹೇಳಿರುತ್ತೇನೆ ಎಂದರೆ ಸರಿಯಲ್ಲ. ದಿಃ20/12/2023 ರಂದು ಕಿಮ್ಸನಲ್ಲಿ ಚಿಕಿತ್ಸೆ ಪಡೆದ ನಂತರ ನೀವೇನು ಎದುರುದಾರ ನಂ.2 ಇವರ ವಿರುದ್ಧ ಫಿರ್ಯಾದಿ ಸಲ್ಲಿಸಲಿಲ್ಲ ಎಂದರೆ ಸಾಕ್ಷಿ ನಾನು ಸಲ್ಲಿಸಲು ಹೋಗಿದ್ದೆ ಆದರೆ ಎದುರುದಾರ ನಂ.2 ಇವರು ಸ್ವತಃ ನನ್ನ ಜೊತೆ ಮಾತನಾಡಿ ಇಲ್ಲಿಯೇ ಮುಗಿಸೋಣ ಫಿರ್ಯಾದಿ ನೀಡಬೇಡಿ ಎಂದು ಹೇಳಿದ್ದರು ಹಾಗಾಗಿ ಫಿರ್ಯಾದಿ ನೀಡಿರುವುದಿಲ್ಲ. ಕಿಮ್ಸ ಆಸ್ಪತ್ರೆಯಲ್ಲಿ ಮೃತ ಅಶೋಕ ಕುಲಕರ್ಣಿ ಹಾಗೂ ಅವರ ತಂದೆ ಮಾಧವರಾವ ಕುಲಕರ್ಣಿ ಇವರು ನಿಮ್ಮ ತಪ್ಪಿನಿಂದ ಅಪಘಾತವಾಗಿದೆ ಎಂದು ಪೊಲೀಸರಿಗೆ ಹೇಳಿಕೆ ನೀಡಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅದಾದ ನಂತರ ಪೊಲೀಸರು ನನ್ನ ವಾಹನವನ್ನು ಜಪ್ತುಪಡಿಸಿಕೊಂಡು ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ದೋಷಾರೋಪಣೆಪಟ್ಟಿ ಪ್ರಕಾರ ದಿಃ23/12/2023 ರಂದು ನಿಮ್ಮನ್ನು

ಪೊಲೀಸರು ದಸ್ತಗಿರಿ ಮಾಡಿ ಅದೇ ದಿನ ಬಿಡುಗಡೆ ಮಾಡಿರುತ್ತಾರೆಂದರೆ ಸಾಕ್ಷಿ ಅದು ಸುಳ್ಳು ಎಂದು ನುಡಿಯುತ್ತಾರೆ. ಪೊಲೀಸರು ಮೊದಲು ನಿಮ್ಮನ್ನು ಬಿಡುಗಡೆ ಮಾಡಲು ಜಾಮೀನು ಪತ್ರ ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿ ಪಡೆದುಕೊಂಡಿಲ್ಲ ಎಂದು ನುಡಿಯುತ್ತಾರೆ. ಅಪಘಾತವಾದ 3 ನೇ ದಿನ ನಾನು ಠಾಣೆಗೆ ಹೋಗಿ ನನ್ನ ವಾಹನ ಕೊಟ್ಟಿರುತ್ತೇನೆ. ನಿಮ್ಮ ತಪ್ಪು ಇಲ್ಲ ಎಂದು ನಿಮಗೆ ಅಥವಾ ನಿಮ್ಮ ತಂದೆಗೆ ಪಿರ್ಯಾದಿ ನೀಡುವ ಹಾಗೆ ಆಯಿತು ಅಥವಾ ಇಲ್ಲವಾ ಎಂದರೆ ಸಾಕ್ಷಿ ನಾವು ಪಿರ್ಯಾದಿ ಸಲ್ಲಿಸಿರುತ್ತೇವೆ ನುಡಿಯುತ್ತಾರೆ. ಸದರಿ ಪಿರ್ಯಾದಿಯ ಪ್ರತಿ ನಿಮ್ಮ ಹತ್ತಿರ ಇದೆಯಾ ಎಂದರೆ ಸಾಕ್ಷಿ ಅದು ನಮ್ಮ ವಕೀಲರ ಹತ್ತಿರ ಇದೆ. ಸದರಿ ದಾಖಲೆ ನಮ್ಮ ವಕೀಲರ ಹತ್ತಿರ ಇದೆ ಎಂದು ನನಗೆ ಗೊತ್ತು. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ನಾನು ಪೊಲೀಸರಿಗೆ ಪಿರ್ಯಾದಿ ನೀಡಿರುತ್ತೇನೆಂದು ಕಾಣಿಸಿರುತ್ತೇನೆ. ನಾನು ನನ್ನ ವಾಹನವನ್ನು ಅತೀ ವೇಗವಾಗಿ ಹಾಗೂ ನಿರ್ಲಕ್ಷತನದಿಂದ ಚಾಲನೆ ಮಾಡಿಕೊಂಡು ಹೋಗಿ ಎದುರುದಾರ ನಂ.2 ಇವರಿಗೆ ಡಿಕ್ಕಿಹೊಡೆದ ಪರಿಣಾಮವಾಗಿ ಅವರಿಗೆ ಗಾಯಗಳಾಗಿ ಅದೇ ಗಾಯಗಳಿಂದ ಅವರು ಮೃತಪಟ್ಟಿರುತ್ತಾರೆಂದರೆ ಸರಿಯಲ್ಲ. ಮೃತ ಅಶೋಕ ಇವರಿಗೆ ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

7. ನಿಪಿ.13 ದಾಖಲೆ ಕಂಪನಿಯವರು ನೀಡಿದ ದಾಖಲೆಯಲ್ಲ ಹಾಗೂ ಅದನ್ನು ನಾನು ಸೃಷ್ಟಿಸಿ ಹಾಜರಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾಖಲೆ ನನಗೆ ಸಂಬಂಧಪಟ್ಟ ಸ್ಯಾಲರಿ ಸ್ಲಿಪ್ ಅಲ್ಲ ಎಂದರೆ ಸರಿಯಲ್ಲ. ನನಗೆ ನಮ್ಮ ಕಂಪನಿಯವರು ಮೆಡಿಕಲ್ ರೀಎಂಬರ್ಸಮೆಂಟ್ ಮಾಡುತ್ತಾರೆ ಎಂದರೆ ಸರಿ. ನೀವು ನಿಮ್ಮ ಕಂಪನಿಯ ಪರವಾಗಿ ಬಿಲ್ ಗಳನ್ನು ರೀಎಂಬರ್ಸಮೆಂಟ್ ಮಾಡಿಕೊಂಡಿರುತ್ತಿರಿ ಎಂದರೆ ಸಾಕ್ಷಿ ನನಗೆ ಚಿಕ್ಕ ಗಾಯವಾದ ಕಾರಣ ನಾನು ಸದರಿ ಸೌಲಭ್ಯ ಪಡೆದುಕೊಂಡಿಲ್ಲ ಎಂದು ನುಡಿಯುತ್ತಾರೆ. ನನಗೆ ಯಾವುದೇ ಗಾಯಗಳು ಆಗದೇ ಇರುವ ಕಾರಣ ನನಗೆ ಯಾವುದೇ ವೈದ್ಯಕೀಯ ಖರ್ಚು ವೆಚ್ಚ ಬಂದಿಲ್ಲ ಎಂದರೆ ನಿಜ. ನಾನು ಮುಂಚಿನ ತರಹ ಕೆಲಸ ಮಾಡಿಕೊಂಡು ಹೋಗುತ್ತಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಎರಡು ತಿಂಗಳುಗಳವರೆಗೆ ನಾನು ಕೆಲಸಕ್ಕೆ ಹೋಗಲಿಲ್ಲ ಎಂದು ನುಡಿಯುತ್ತಾರೆ. ಎರಡು ತಿಂಗಳುಗಳವರೆಗೆ ನಾನು ಕೆಲಸಕ್ಕೆ ಗೈರುಹಾಜರಿದ್ದ ಬಗ್ಗೆ ರಜೆ ಪಡೆದಿಲ್ಲ ಅಥವಾ ಯಾವುದೇ ದಾಖಲೆಗಳನ್ನು ಹಾಜರಪಡಿಸಿಲ್ಲ ಎಂದರೆ ಸರಿ. ನಾನು ಎರಡು ತಿಂಗಳುಗಳವರೆಗೆ ಕೆಲಸಕ್ಕೆ ಹೋಗಿಲ್ಲ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಅಂಗನ್ಯೂನ್ಯತೆ ಉಂಟಾಗದೇ ಇರುವ ಕಾರಣ ನನಗೆ ಯಾವುದೇ ಪರಿಹಾರ ಪಡೆಯಲು ಬರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**